ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86,

# ದಿನಾಂಕ:05-04-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯ :ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./17/2020-21 ದಿನಾಂಕ: 31-03-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಘ.ತ್ಯಾ.ನಿ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ. ಹೊನ್ನಪ್ಪ | ವಾರ್ಡ್ ಸಮಿತಿ ಸದಸ್ಯರು |
| 3. | ಶ್ರೀ. ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ |
| 4. | ಶ್ರೀ. ಆಕಾಶ್ | ವಾರ್ಡ್ ಸಮಿತಿ ಸದಸ್ಯರು |
| 5. | ಶ್ರೀ.ಹೆಚ್.ಎಂ ಗಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು,ವಾರ್ಡ್-67 |
| 6. | ಶ್ರೀ. ಅನಿಲ್. | ಕಿರಿಯ ಆರೋಗ್ಯ ಪರಿವೀಕ್ಷಕರು, |
| 7. | ಶ್ರೀ. ನಾಗರಾಜು | ಸಹಾಯಕ ಅಭಿಯಂತರರು, ಬೆಂ.ಜ.ಮಂ |
| 8. | ಶ್ರೀ. ಸತೀಶ್ | ಬೀದಿ ದೀಪ ಗುತ್ತಿಗೆದಾರರು |
| 9. | ಶ್ರೀ. ಗೋಪಾಲ್‌ಕೃಷ್ಣ | ಪೋಲಿಸ್ ಕಾನ್ಸ್‌ಟೆಬಲ್, ರಾಜಾಜಿನಗರ ಪೋಲಿಸ್ ಠಾಣೆ |
| 10. | ಶ್ರೀ. ವಿಶಾಲ್ | ವಾರ್ಡ್ ಮಾರ್ಷಲ್. |
| 12. | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಖೆ, |
| 13. | ಶ್ರೀ. ವಿಶಾಲ್ | ವಾರ್ಡ ಮಾರ್ಷಲ್. ವಾರ್ಡ್-67 |
| 14. | ಶ್ರೀ. ಕೆ. ಗಂಗಚೆಲುವಯ್ಯ | ತೋಟಗಾರಿಕೆ ಇಲಾಖೆ, ಮಹಾಕ್ಷ್ಮೀಪುರಂ ವಾರ್ಡ್-67 |
| 15. | ಶ್ರೀ. ಮಲ್ಲೈಯ್ಯ | ಅರಣ್ಯ ಇಲಾಖೆ ಗುತ್ತಿಗೆದಾರರ ಸಿಬ್ಬಂದಿ, ವಾರ್ಡ್-67 |

ವಿಶ್ವನಾಥ.ಎ



ಮು.ತಿ.ನೋ.

Scanned by CamScanner

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಎಪ್ರಿಲ್ ಮಾಹೆಯ ಎರಡನೇ ಸೋಮವಾರ ದಿ:05/04/2021ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ-67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಸಭೆಗೆ ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

**<u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:</u>**

| | |
|---|---|
| ಶ್ರೀ. ಉದಯ ಶಂಕರ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಮಹಾಲಕ್ಷ್ಮೀಲೇಔಟ್ ಸಿಗ್ನಲ್‌ನಿಂದ ಪಂಚಮುಖಿ ದೇವಸ್ಥಾನದ ಕಡೆಗೆ (ಬಲಕ್ಕೆ) ತಿರುಗುವ ಮಾರ್ಗವನ್ನು ಡಿವೈಡರ್‌ನಿಂದ ಮುಚ್ಚಿದ್ದು ಅದನ್ನು [illegible] ಮಾರ್ಗವನ್ನು ತೆರೆಯುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುವುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ 1ನೇ ಬ್ಲಾಕ್ ಸಿಗ್ನಲ್ ಹತ್ತಿರ ವೈಟ್ ಟಾಪಿಂಗ್ ಕಾಮಗಾರಿಯು ಪ್ರಾರಂಭವಾಗಿದ್ದು ಮಾರ್ಗವನ್ನು ಡಿವೈಡರ್‌ನಿಂದ ಮುಚ್ಚಿದ್ದು ಕಂಡುಬಂದಿರುತ್ತದೆ . ಇದರ ಬಗ್ಗೆ ಕಾರ್ಯಪಾಲಕ ಅಭಿಯಂತರರು ವೈಟ್ ಟಾಪಿಂಗ್ ರವರ ಹತ್ತಿರ ಚರ್ಚಿಸಿದ್ದು ಕಾಮಗಾರಿ ಮುಗಿದನಂತರ ಬಲ ಮಾರ್ಗವನ್ನು ತೆರೆಯುವುದಾಗಿ ತಿಳಿಸಿದರು |
| ಶ್ರೀ. ಹೊನ್ನಪ್ಪ<br>**ವಾರ್ಡ್ ಸಮಿತಿ ಸದಸ್ಯರು** | ವಾರ್ಡನ ಎಲ್ಲಾಕಡೆ ಖಾಸಗಿ ಕಂಪನಿಯವರು ಓ.ಎಫ್.ಸಿ ಕೇಬಲ್ ಅಳವಡಿಸಲು ರಸ್ತೆ ಅಗೆದು ದುರಸ್ತಿ ಮಾಡದೆ ಹಾಗೆಯೆ ಬಿಟ್ಟಿರುತ್ತಾರೆ ಇದರಿಂದ ಸಾರ್ವಜನಿಕರಿಗೆ ಹಾಗು ವಾಹನ ಸಂಚಾರಕರಿಗೆ ತೊಂದರೆಯಾಗುತ್ತಿರುತ್ತದೆ. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ ಸದಸ್ಯರ ದೂರಿಗೆ ಸಂಭಂದಿಸಿದಂತೆ ಸಹಾಯಕ ಅಭಿಯಂತರರು ವಾರ್ಡ-67 ರವರಿಗೆ ಕ್ರಮವಹಿಸಲು ಸಭೆಯಲ್ಲಿ ಸೂಚಿಸಿದರು |
| ಶ್ರೀ. ಹೊನ್ನಪ್ಪ<br>**ವಾರ್ಡ್ ಸಮಿತಿ ಸದಸ್ಯರು** | ವಾರ್ಡನ ಘ.ತ್ಯಾ.ನಿ ಮೇಸ್ತ್ರಿ (ನೇರ ವೇತನ) ಯೋಗೇಶ್‌ರವರನ್ನು ವಾರ್ಡ ನಂ-[illegible]ಕ್ಕೆ ನಿಯೋಜಿಸಿರುತ್ತಾರೆ, ಅವರನ್ನು ಮತ್ತೆ ವಾರ್ಡ-67ಕ್ಕೆ ನಿಯೋಜಿಸಲು ವಾರ್ಡ ಸಮಿತಿ ಸದಸ್ಯರು ಸಭೆಯಲ್ಲಿ ಮನವಿಮಾಡಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಎಲ್ಲೆಂದರಲ್ಲಿ ಕಸ ಹಾಕುವವರಿಗೆ ದಂಡ ಹಾಕಲು ಮಾರ್ಷಲ್‌ಗೆ ಸೂಚಿಸಿದರು |
| ವಿಶಾಲ್<br>ಮಾರ್ಷಲ್ ವಾರ್ಡ-67 | ನೋಡಲ್ ಅಧಿಕಾರಿಗಳು ಸೂಚಿಸಿರುವಂತೆ ವಾರ್ಡನಲ್ಲಿ ಎಲ್ಲೆಂದರಲ್ಲಿ ಕಸ ಹಾಕುವವರಿಗೆ ದಂಡ ಹಾಕಲಾಗುತ್ತಿದೆ ಮತ್ತು ಕಸವಿಂಗಡಣೆ ಮಾಡದವರ ವಿರುದ್ಧವು ದಂಡ ಹಾಕಲಾಗುತ್ತಿದೆ ಎಂದು ಮಾಹಿತಿ ವದಗಿಸಿದರು |
| ಆಕಾಶ್<br>**ವಾರ್ಡ್ ಸಮಿತಿ ಸದಸ್ಯರು** | ವಾರ್ಡನ ಅನನ್ಯ ಆಸ್ಪತ್ರೆ ಹತ್ತಿರ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡುತ್ತಿರುತ್ತಾರೆ ಇದರಿಂದ ಸಾರ್ವಜನಿಕರಿಗೆ ಹಾಗು ವಾಹನ ಸವಾರರಿಗೆ ತೊಂದರೆ ಉಂಟಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |



Scanned by CamScanner

| | |
|---|---|
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಮಲ್ಲೇಶ್ವರಂ ಠಾಣಾ ವ್ಯಾಪ್ತಗೆ ಬರುವುದರಿಂದ ಮಲ್ಲೇಶ್ವರಂ ಠಾಣಾ ಪೋಲಿಸ್ ರವರಿಗೆ ಕ್ರಮವಹಿಸಲು ಸೂಚಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ 1ನೇ ಬ್ಲಾಕ್ ನ ಉದಯಕುಮಾರ್ ಪಾರ್ಕ ಹತ್ತಿರ ಮ್ಯಾನ್ ಹೋಲ್ ದುರಸ್ತಿ ಮಾಡಿ ಹೂಳನ್ನು ರಸ್ತೆ ಮೇಲೆ ಬಿಟ್ಟಿರುವುದು ಕಂಡುಬಂದಿರುತ್ತದೆ ಇದರಿಂದ ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿರುತ್ತದೆ ಇದನ್ನು ತೆರವುಗೊಳಿಸಲು ಬೆಂ.ಜ.ಮಂ ಅಭಿಯಂತರರಿಗೆ ಸೂಚಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡನ ಚಿನ್ನರದಾಮು ಉದ್ಯಾನವನದ ಹತ್ತಿರ ಮರದ ಕೊಂಬೆ ರಸ್ತೆಗೆ ಅಡ್ಡಲಾಗಿದ್ದು ಅದನ್ನು ತೆರವುಗೊಳಿಸಲು ಅರಣ್ಯ ಇಲಾಖೆ ಗುತ್ತಿಗೆದಾರರ ಸಿಬ್ಬಂದಿ ಮಲ್ಲಯ್ಯ ರವರಿಗೆ ಸೂಚಿಸಿದರು |
| ಮಲ್ಲಯ್ಯ ಅರಣ್ಯ ಇಲಾಖೆ | ವಾರ್ಡ್‌ನ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ಮರದ ಕೊಂಬೆಯನ್ನು ತೆರವುಗೊಳಿಸಲಾಗುವುದಾಗಿ ತಿಳಿಸಿದರು |
| ಆಕಾಶ್ **ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ ಅನನ್ಯ ಆಸ್ಪತ್ರೆ ಹತ್ತಿರ ಬ್ಯಾರಿಕೇಡ್ ಅನ್ನು ಪೋಲಿಸ್ ಇಲಾಖೆಯವರು ಹಾಕಿರುತ್ತಾರೆ ಅದನ್ನು ಈಗ ತೆರವುಗೊಳಿಸಿದ್ದಾರೆ ಮತ್ತೆ ಅದನ್ನು ಎಂದಿನಂತೆ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಮಲ್ಲೇಶ್ವರಂ ಠಾಣಾ ವ್ಯಾಪ್ತಗೆ ಬರುವುದರಿಂದ ಮಲ್ಲೇಶ್ವರಂ ಠಾಣಾ ಪೋಲಿಸ್ ರವರಿಗೆ ಕ್ರಮವಹಿಸಲು ಸೂಚಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡನ ಅನನ್ಯ ಆಸ್ಪತ್ರೆ ಹತ್ತಿರ ಡೇಬ್ರೀಸ್ ಇದ್ದು ಅದನ್ನು ಸಹಾಯಕ ಅಭಿಯಂತರರು ವಾರ್ಡ-67 ರವರಿಗೆ ಕ್ರಮವಹಿಸಲು ಸಭೆಯಲ್ಲಿ ಸೂಚಿಸಿದರು |
| ಗೋಪಾಲ್‌ಕೃಷ್ಣ ಪೋಲಿಸ್ ಇಲಾಖೆ | ವಾರ್ಡ್‌ನ ಮಹಾಲಕ್ಷ್ಮೀಪುರಂ ಸಿಗ್ನಲ್ ಇಂದ ಪಂಚಮುಖಿ ದೇವಾಲಯದ ವರೆಗು ಹಲವಾರು ಕಡೆ ಪಾದಚಾರಿ ಮಾರ್ಗದ ಪೆವರ್ಸ್ ಸಿಂಕ್ ಆಗಿದೆ, ಮತ್ತು ವಾರ್ಡ್‌ನಲ್ಲಿ ಹಲವಾರು ಕಡೆ ಕಟ್ಟಡ ಕಾಮಗಾರಿ ನೆಡೆಯುತ್ತಿದ್ದು ಕಟ್ಟಡ ಮಾಲೀಕರು ಕಟ್ಟಡದ ಮುಂದೆ ಮರಳು, ಜೆಲ್ಲಿ ಮುಂತಾದ ಕಟ್ಟಡ ನಿರ್ಮಾಣ ವಸ್ತುಗಳನ್ನು ಕಟ್ಟಡದ ಮುಂದೆ ರಸ್ತೆಗೆ ಅಡಲಾಗಿ ಹಾಕಿರುವುದರಿಂದ ವಾಹನ ಸವಾರರರಿಗೆ ತೊಂದರೆ ಊಂಟಾಗುತ್ತಿರುತ್ತದೆ |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಪೋಲಿಸ್ ಕಾನ್ಸ್‌ಟೆಬಲ್ ರವರ ದೂರಿಗೆ ಸಂಭಂದಿಸಿದಂತೆ ವಾರ್ಡ ಸಹಾಯಕ ಅಭಿಯಂತರರು ವಾರ್ಡ-67 ರವರಿಗೆ ಕ್ರಮವಹಿಸಲು ಸಭೆಯಲ್ಲಿ ಸೂಚಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ಹಿರಿಯ ಆರೋಗ್ಯ ಪರೀವಿಕ್ಷಕರನ್ನು ಉದೇಶಿಸಿ ಕೋವಿಡ್ ಪ್ರಕರಣಗಳನ್ನು ನಿಗ ವಹಿಸಿ ತುರ್ತು ಕ್ರಮ ಕೈಗೊಳಲು ಮತ್ತು ಸುಕ್ತ ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಳಲು ತಿಳಿಸಿದರು ಮತ್ತು ಕೋವಿಡ್ ಪ್ರಗತಿ ಪರಿಶಿಲನೇ ಮಾಡಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ಕಂದಾಯ ಇಲಾಖೆಯ ಅಧಿಕಾರಿಗಳು ಗೈರುಹಾಜರಾಗಿರುತ್ತಾರೆ. |

**ಪ್ರತಿಯನ್ನು**

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.



Scanned by CamScanner

3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

**ಕಾರ್ಯದರ್ಶಿ ಹಾಗೂ**
**ಸಹಾಯಕ ಅಭಿಯಂತರರು, ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧ್ಯಕ್ಷರು ಹಾಗೂ**
**ನೋಡಲ್ ಅಧಿಕಾರಿಗಳು ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**



ಪು.ತಿ.ನೋ.

Scanned by CamScanner